# ಪ್ರಶ್ನೋತ್ತರ

| ಕ್ರಮ ಸಂಖ್ಯೆ | ಪ್ರಶ್ನಾವಳಿ | ಉತ್ತರ |
|---|---|---|
| 1 | ಸಹಕಾರ ಸಂಘಗಳ ಲೆಕ್ಕಪರಿಶೋಧನೆಗಾಗಿ ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಳ್ಳುವ ವಿಧಾನ ಯಾವುದು? | ಸಹಕಾರ ಸಂಘಗಳ ನಿಯಮಗಳ ನಿಯಮ 29ಬಿ(3)ರಲ್ಲಿನ ಅವಕಾಶದಂತೆ ಸಹಕಾರ ಸಂಘಗಳನ್ನು ಅವುಗಳ ದುಡಿಯುವ ಬಂಡವಾಳ / ವಹಿವಾಟಿನ ಆಧಾರದ ಮೇಲೆ ಹಾಗೂ ಲೆಕ್ಕಪರಿಶೋಧಕರುಗಳನ್ನು ಅವರ ಅನುಭವದ ಆಧಾರದ ಮೇಲೆ ಗುಂಪುಗಳನ್ನಾಗಿ ಮಾಡಿ ಇಲಾಖಾ ವೆಬ್‌ಸೈಟ್ ವಿಳಾಸ http://www.sahakaradarpana.kar.nic.in ರಲ್ಲಿ ಪ್ರಚುರಪಡಿಸಲಾಗಿರುತ್ತದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 63(2)ರನ್ವಯ ಸಹಕಾರ ಸಂಘಗಳು ಅವುಗಳ ಗುಂಪುಗಳಿಗನುಗುಣವಾಗಿ ಲೆಕ್ಕ ಪರಿಶೋಧಕರನ್ನು ಅವುಗಳ ಸಾಮಾನ್ಯ ಸಭೆಯಲ್ಲಿ ಆಯ್ಕೆ ಮಾಡಿಕೊಳ್ಳಬೇಕಿರುತ್ತದೆ. |
| 2 | ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಯನ್ನು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖಾ ಅಧಿಕಾರಿ / ಸಿಬ್ಬಂದಿಗಳು ಮಾತ್ರ ನಿರ್ವಹಿಸಬೇಕೆ? ಚಾರ್ಟರ್ಡ್ ಅಕೌಂಟೆಂಟ್‌ರವರುಗಳು ಲೆಕ್ಕಪರಿಶೋಧನೆಯನ್ನು ನಿರ್ವಹಿಸ ಬಹುದೇ? | ಹೌದು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1960ರ ನಿಯಮ 30ರ ಅವಕಾಶದಂತೆ ಇಲಾಖೆಯು ಮಾರ್ಗಸೂಚಿ ಯನ್ನು ನೀಡಿರುತ್ತದೆ. ಈ ಕೆಳಕಂಡ ಆದೇಶ / ಮಾರ್ಗಸೂಚಿ ಯನ್ನು ಅವಗಾಹಿಸಲು ಕೋರಿದೆ.<br>1. ಸಂಖ್ಯೆ:ಎಡಿಎಫ್/ಎಡಿಸಿ/2012-13, ದಿನಾಂಕ: 21-09-2013.<br>2. ಸರ್ಕಾರದ ಆದೇಶ ಸಂಖ್ಯೆ:ಸಿಓ/09/ಸಿಎಲ್‌ಎಂ/2007, ಬೆಂಗಳೂರು, ದಿನಾಂಕ:08-03-2007.<br>3. ಸರ್ಕಾರದ ಆದೇಶ ಸಂಖ್ಯೆ:ಸಿಓ/198/ಸಿಎಲ್‌ಎಂ/2010, ಬೆಂಗಳೂರು, ದಿನಾಂಕ:04-01-2011. |
| 3 | ಇಲಾಖಾ ವತಿಯಿಂದ ನಿರ್ವಹಿಸಲ್ಪಡುವ ಲೆಕ್ಕಪರಿಶೋಧನೆಗೆ ಸಹಕಾರ ಸಂಘಗಳು ಲೆಕ್ಕಪರಿಶೋಧನಾ ಶುಲ್ಕವನ್ನು ಪಾವತಿಸ ಬೇಕೆ? | ಹೌದು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1960ರ ನಿಯಮ 30ರ ಅವಕಾಶದಂತೆ ಇಲಾಖೆಯು ಮಾರ್ಗಸೂಚಿ ಯನ್ನು ನೀಡಿರುತ್ತದೆ. ಈ ಕೆಳಕಂಡ ಆದೇಶ / ಮಾರ್ಗಸೂಚಿ ಯನ್ನು ಅವಗಾಹಿಸಲು ಕೋರಿದೆ.<br>4. ಸಂಖ್ಯೆ:ಎಡಿಎಫ್/ಎಡಿಸಿ/2012-13, ದಿನಾಂಕ: 21-09-2013.<br>5. ಸರ್ಕಾರದ ಆದೇಶ ಸಂಖ್ಯೆ:ಸಿಓ/09/ಸಿಎಲ್‌ಎಂ/2007, ಬೆಂಗಳೂರು, ದಿನಾಂಕ:08-03-2007.<br>6. ಸರ್ಕಾರದ ಆದೇಶ ಸಂಖ್ಯೆ:ಸಿಓ/198/ಸಿಎಲ್‌ಎಂ/2010, ಬೆಂಗಳೂರು, ದಿನಾಂಕ:04-01-2011. |
| 4 | ಸಹಕಾರ ಸಂಘಗಳು ಚಾರ್ಟರ್ಡ್ ಅಕೌಂಟೆಂಟ್‌ರುಗಳು ನಿರ್ವಹಿಸುವ ಲೆಕ್ಕ ಪರಿಶೋಧನೆ ಸಂಬಂಧ ಅವರುಗಳಿಗೆ ಪಾವತಿಸಬೇಕಾದ ಸಂಭಾವನೆ ಕುರಿತು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರಿಂದ ಹೊರಡಿಸಿರುವ ಮಾರ್ಗ ಸೂಚಿಯನ್ನು ಅನುಸರಿಸಬೇಕೆ? | ಹೌದು, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 30 ರನ್ವಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಹೊರಡಿಸಿರುವ ಮಾರ್ಗಸೂಚಿಯನ್ನು ಅನುಸರಿಸಬೇಕಿರುತ್ತದೆ. |

| | | |
|---|---|---|
| 5 | ಲೆಕ್ಕಪರಿಶೋಧನಾ ಶುಲ್ಕ ಶ್ರೇಣಿಯನ್ನು ನಿಗದಿಪಡಿಸಲಾಗಿಯೇ? (Audit Fee Scale) | ಹೌದು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ದಿನಾಂಕ:21–09–2013ರಂದು ಸಂಖ್ಯೆ: ಎಡಿಎಫ್/ಎಡಿಸಿ/ 2012–13 ರಲ್ಲಿ ಮಾರ್ಗಸೂಚಿಯನ್ನು ನೀಡಲಾಗಿರುತ್ತದೆ. |
| 6 | ಮರು ಲೆಕ್ಕಪರಿಶೋಧನೆಗೆ ಅವಕಾಶವಿದೆಯೇ? ಇದ್ದಲ್ಲಿ ಅನುಸರಿಸ ಬೇಕಾದ ಮಾರ್ಗ ಯಾವುದು? | ಹೌದು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 63(13) ರನ್ವಯ ರಾಜ್ಯ ಸರ್ಕಾರಕ್ಕೆ, ಸಹಕಾರ ಸಂಘವು ಸಲ್ಲಿಸಿದ ಅರ್ಜಿಯ ಮೇಲೆ ಅಥವಾ ಅನ್ಯಥಾ ಸಂಘದ ಲೆಕ್ಕ ಪತ್ರಗಳನ್ನು ಮರು ಲೆಕ್ಕಪರಿಶೋಧನೆ ಮಾಡುವುದು ಅವಶ್ಯಕ ವೆಂದು ಕಂಡು ಬಂದಲ್ಲಿ ಮರು ಲೆಕ್ಕಪರಿಶೋಧನೆಗೆ ರಾಜ್ಯ ಸರ್ಕಾರವು ಆದೇಶಿಸಲು ಅವಕಾಶವಿರುತ್ತದೆ. |
| 7 | ಲೆಕ್ಕಪರಿಶೋಧನಾ ವರದಿಯನ್ನು ಬಿಡುಗಡೆಗೊಳಿಸುವವರು ಯಾರು? | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 63(8)ರನ್ವಯ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ನಿರ್ವಹಿಸುವ ಲೆಕ್ಕಪರಿಶೋಧಕರೇ ಲೆಕ್ಕಪರಿಶೋಧನಾ ವರದಿಗಳನ್ನು ಬಿಡುಗಡೆ ಗೊಳಿಸುವರು. |
| 8 | ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಸಂಬಂಧದ ವಿಷಯಗಳ ಬಗ್ಗೆ ಯಾರನ್ನು ಸಂಪರ್ಕಿಸಬೇಕು? (For clarification) | ಸಂಬಂಧಿಸಿದ ಜಿಲ್ಲಾ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರನ್ನು ಲೆಕ್ಕಪರಿಶೋಧನೆ ಸಂಬಂಧ ವಿಷಯಗಳ ಬಗ್ಗೆ ಸಂಪರ್ಕಿಸಬಹುದಾಗಿರುತ್ತದೆ. |
| 9 | ಲೆಕ್ಕಪರಿಶೋಧನೆಗೆ ಸಹಕಾರ ಸಂಘಗಳು ಮಾತ್ರವೇ ಆರ್ಥಿಕ ತಃಖ್ತೆಗಳನ್ನು ಹಾಗೂ ಇತರೆ ಸಂಬಂಧಿಸಿದ ಕುಳುವಾರುಗಳನ್ನು ಸಲ್ಲಿಸಬೇಕೆ? | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 63(7) ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳ ನಿಯಮ 29(3) ರನ್ವಯ ಸಹಕಾರ ಸಂಘಗಳು ಸಹಕಾರ ವರ್ಷ ಮುಕ್ತಾಯವಾದ 30 ದಿನಗಳೊಳಗೆ ಲೆಕ್ಕಪರಿಶೋಧಕರಿಗೆ ಆರ್ಥಿಕ ತಃಖ್ತೆಗಳನ್ನು ಹಾಗೂ ಎಲ್ಲಾ ಕುಳುವಾರುಗಳನ್ನು ಅವಶ್ಯವಾಗಿ ಸಲ್ಲಿಸಬೇಕಾಗಿರುತ್ತದೆ. |
| 10 | ಲೆಕ್ಕಪರಿಶೋಧನಾ ವರದಿಗಳನ್ನು ನಿಗದಿ ಪಡಿಸಿದ ನಮೂನೆಯಲ್ಲಿ ನೀಡಬೇಕಾಗಿ ರುತ್ತದೆಯೇ? | ಹೌದು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯು ವಿವಿಧ ಪ್ರವರ್ಗದ ಸಹಕಾರ ಸಂಘಗಳಿಗೆ ಲೆಕ್ಕಪರಿಶೋಧನಾ ವರದಿ ನಮೂನೆಗಳನ್ನು ನಿಗದಿಪಡಿಸಿರುತ್ತದೆ. ಕುಳುವಾರುಗಳು ಹಾಗೂ ದೃಢೀಕರಣಗಳೊಂದಿಗೆ ಲೆಕ್ಕಪರಿಶೋಧನಾ ವರದಿ ಯನ್ನು ಸಂಬಂಧಿಸಿದ ಲೆಕ್ಕಪರಿಶೋಧಕರು ನೀಡಬೇಕಾಗಿರುತ್ತದೆ. ಲೆಕ್ಕಪರಿಶೋಧಕರು ವರದಿಯಲ್ಲಿ ವಿವರಿಸಬೇಕಾದ ಇತರೆ ವಿವರಗಳನ್ನು ವಿವರಿಸಲು ಸ್ವತಂತ್ರರಾಗಿರುತ್ತಾರೆ. |
| 11 | ಸಹಕಾರ ಸಂಘಗಳ ಲೆಕ್ಕಪರಿಶೋಧನೆ ನಿರ್ವಹಿಸುವ ಲೆಕ್ಕಪರಿಶೋಧಕರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳನ್ನು ಅನುಸರಿಸುವುದು ಅವಶ್ಯವೇ? | ಹೌದು, ಸಹಕಾರ ಸಂಘಗಳ ಲೆಕ್ಕಪರಿಶೋಧನೆ ನಿರ್ವಹಿಸುವ ಲೆಕ್ಕಪರಿಶೋಧಕರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮಗಳು 1960, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರಿಂದ / ಸೌಹಾರ್ದ ಸಹಕಾರಿ / ನಬಾರ್ಡ್ / ಭಾರತೀಯ ರಿಜ಼ರ್ವ್ ಬ್ಯಾಂಕ್ / ಸರ್ಕಾರದ ಆದೇಶಗಳು ಮತ್ತು ಅನ್ವಯವಾಗುವ ಇತರೆ ಎಲ್ಲಾ ನಿಯಮಗಳನ್ನು ನೀಡಿರುವ ಮಾರ್ಗಸೂಚಿಗಳು, ಕೈಪಿಡಿ, ಸುತ್ತೋಲೆಗಳನ್ನು ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ನಿರ್ವಹಿಸುವಲ್ಲಿ ಅನುಸರಿಸುವುದು ಅತ್ಯವಶ್ಯ. |
| 12 | ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಯನ್ನು | ಹೌದು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 63(1) ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 33(1) |

| | | |
|---|---|---|
| | ನಿರ್ವಹಿಸುವ ಮೊದಲು ಚಾರ್ಟರ್ಡ್ ಅಕೌಂಟೆಂಟರುಗಳು ಅರ್ಹ ಸನ್ನದು ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ಒಳಗೊಳ್ಳುವುದು ಅವಶ್ಯವೇ? | ರಲ್ಲಿನ ಅಧಿಕಾರದಂತೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಅರ್ಹ ಲೆಕ್ಕಪರಿಶೋಧಕರ ಪಟ್ಟಿಯನ್ನು ತಯಾರಿಸಿ ನಿರ್ವಹಿಸುವ ಪ್ರಾಧಿಕಾರಿಯಾಗಿರುತ್ತಾರೆ. |